ತಿವಿತದಿಂದ. ಸಮಾಜದಲ್ಲಿ ಲಿಂಗಭೇದದೊಂದಿಗೆ ಗುದ್ದಾಡುವುದೇ ನಮಗಿರುವ ಅತಿ ದೊಡ್ಡ ಸವಾಲು'.

ಸ್ವಾನ್ ಅವರ ಈ ಹೇಳಿಕೆ ಪುರುಷಪ್ರಧಾನ ಕ್ರೀಡೆಯಲ್ಲಿ, ಅಷ್ಟೇ ಏಕೆ, ಸಮಾಜದಲ್ಲಿ ಕೂಡ ಸಾಮರ್ಥ್ಯವಿದ್ದೂ ತಮ್ಮದೊಂದು ಗುರುತು ಮೂಡಿಸಲು ಹೆಣಗುತ್ತಿರುವ ಹೆಣ್ಣುಮಕ್ಕಳ ಮಾತೇ ಆಗಿದೆ.

ಪುಂಡು ಪುರುಷರನ್ನು ಗೂಳಿಗಳು ಎನ್ನುತ್ತಾರೆ. ತಾಳ್ಮೆ, ಮಾತ್ರ ಮಮತೆಯಿಂದ ಆ ಗೂಳಿಗಳನ್ನು ಪಳಗಿಸುವ ಹೆಣ್ಣುಮಕ್ಕಳೂ ಇದ್ದಾರೆ. ಮತ್ತೆ ಕೆಲವು ಜಾಣ–ಸಾಹಸಿ ಹೆಣ್ಣುಮಕ್ಕಳು ಗಂಡುಗೂಳಿಗಳಿಗೆ ಮೂಗುದಾರ ಹಾಕಿ ಹಿಡಿತದಲ್ಲಿ ಇಟ್ಟುಕೊಳ್ಳುವುದೂ ಇದೆ. ಆದರೆ, ವಿರಳ ನಿದರ್ಶನಗಳಾಚೆಗೆ ಲಿಂಗಭೇದದ ತಿವಿತಕ್ಕೆ ಮಹಿಳೆಯರು ತಲೆಮಾರುಗಳಿಂದಲೂ ಒಳಗಾಗುತ್ತಿದ್ದಾರೆ. ಈ ತಿವಿತಕ್ಕೆ ಉತ್ತರದ ರೂಪದಲ್ಲಿ ಸ್ವಾನ್ ಅವರ ಹೇಳಿಕೆಗೆ ವಿಶೇಷ ಮಹತ್ವವಿದೆ.

ಪುರುಷರ ಕ್ರೀಡೆ ಎಂದೇ ಕರೆಸಿಕೊಂಡಿರುವ 'ಗೂಳಿಕಾಳಗ'ದ ಕುರಿತು ಪ್ರಾಣಿದಯಾ ಸಂಘದವರ ಆಕ್ಷೇಪ ಮೊದಲಿನಿಂದಲೂ ಇದೆ. ಆದರೆ ಮೆಕ್ಸಿಕೊದ ಸಂಸ್ಕೃತಿಯಲ್ಲೇ ಗೂಳಿಕಾಳಗ ಬೆರೆತುಬಂದಿರುವ ಕಾರಣ ಆಕ್ಷೇಪಗಳ ನಡುನಡುವೆಯೇ ಎಷ್ಟೋ ಬಾರಿ ನಿಷೇಧಗೊಂಡು ಮತ್ತೆ ಗೂಳಿಕಾಳಗ ಚಾಲ್ತಿಯಲ್ಲಿದೆ.

ಗೂಳಿಕಾಳಗದ ಜೊತೆಜೊತೆಗೆ ಹೆಣ್ಣುಮಕ್ಕಳು ಈ ಕ್ರೀಡೆಯಲ್ಲಿ ಭಾಗವಹಿಸುವುದರ ಕುರಿತು ವಿರೋಧ, ಆಕ್ಷೇಪಗಳು ವ್ಯಕ್ತಗೊಂಡಿವೆ. ಆದರೆ ಇತಿಹಾಸನ್ನೊಮ್ಮೆ ಕೆದಕಿ ನೋಡಿದರೆ, ತಮ್ಮ ಸಾಮರ್ಥ್ಯ, ಛಾಪು, ಅಗಾಧ ಶೌರ್ಯ, ಆತ್ಮಬಲದಿಂದ ಗೂಳಿಕಾಳಗದಲ್ಲಿ ಹೆಸರು ಮೂಡಿಸಿದ 'ಮ್ಯಾಟಡೊರಾಸ್' ಅಥವಾ 'ಟೊರೆರಾಸ್'ಗಳು (ಗೂಳಿಕಾಳಗದಲ್ಲಿ ಹೆಣ್ಣುಮಕ್ಕಳಿಗೆ ಕರೆಯುವ ಹೆಸರು) ಕಾಣಸಿಗುತ್ತಾರೆ. ಹಲವು ಅಡೆತಡೆಗಳಿದ್ದರೂ ಅವುಗಳ ನಡುವೆ ಇಂದಿಗೂ ಈ ಕ್ರೀಡೆಯಲ್ಲಿ ತಮ್ಮ ಅಸ್ತಿತ್ವ ಕಾದುಕೊಂಡು ಬಂದಿರುವ ಮಹಿಳೆಯರು ಉತ್ತಮ ನಿದರ್ಶನದಂತೆ ತೋರುತ್ತಾರೆ.

ಗೂಳಿಕಾಳಗದಲ್ಲಿ ಮಹಿಳೆಯರು ಭಾಗವಹಿಸಿದ್ದ ಕುರುಹು ಶತಶತಮಾನಗಳ ಹಿಂದೆಯೇ ದೊರೆತಿದೆ. ಸ್ಪೇನ್‌ನಲ್ಲಿ ಗೂಳಿಕಾಳಗವನ್ನು ಮಹಿಳೆಯರು ಭಾಗವಹಿಸುತ್ತಿದ್ದ ಕ್ರೀಡೆಯಾಗಿಯೂ ಗುರುತಿಸಲಾಗಿದೆ. 1700ರಿಂದ 1800ರ ಆರಂಭದ ಅವಧಿಯವರೆಗೂ ಮಹಿಳೆಯರು ಗೂಳಿಕಾಳಗದಲ್ಲಿ ತೊಡಗಿಕೊಂಡಿದ್ದರು ಎನ್ನುತ್ತದೆ ಇತಿಹಾಸ. ಮೆಕ್ಸಿಕೊದಲ್ಲಿಯೂ ಗೂಳಿಕಾಳಗಕ್ಕೆ ಸುಮಾರು ಐನೂರು ವರ್ಷಗಳ ಇತಿಹಾಸವಿದೆ. ಇದಕ್ಕೆ ಪುಷ್ಟಿ ಕೊಡುವಂತೆ, ಚಿತ್ರಕಲಾವಿದ ಫ್ರಾನ್ಸಿಸ್ಕೊ ಗೋಯಾ, ಕುದುರೆ ಮೇಲೆ ಕುಳಿತು ಗೂಳಿಯೊಂದಿಗೆ ಸೆಣಸುತ್ತಿದ್ದ ಮಹಿಳಾ ಬುಲ್‌ಫೈಟರ್ ಚಿತ್ರಬಿಡಿಸಿದ್ದರು. ಆ ಚಿತ್ರ 'ಮದರ್ ಆಫ್ ಬುಲ್‌ಫೈಟಿಂಗ್' ಎಂದು ಕರೆಸಿಕೊಂಡಿದ್ದ ನಿಕೊಲಾಸಾ ಎಸ್ಕಾಮಿಲ್ಲ ಅವರದ್ದೆನ್ನಲಾಗಿದ್ದು, 1816ರಲ್ಲಿ ಈ ಚಿತ್ರ ರಚಿತವಾಗಿದೆ.

ಸ್ಪೇನ್‌ನ ಅಂತರ್ಯುದ್ಧದ ಸಮಯದಲ್ಲಿ ಗೂಳಿಕಾಳಗದ ಮಹಿಳೆಯರು ಚದುರಿ, ಇತರ ಸ್ಪಾನಿಷ್ ಮಾತನಾಡುವ ದೇಶಗಳು ಹಾಗೂ ಅಮೆರಿಕದಲ್ಲಿ ನೆಲೆಸಿದರು. ಆನಂತರ ಹಲವೆಡೆ ಗೂಳಿಕಾಳಗ ಪ್ರಚಲಿತಕ್ಕೆ ಬಂತು. ಆದರೆ ಸ್ಪೇನ್–ಲ್ಯಾಟಿನ್ ಅಮೆರಿಕ, ಏಷ್ಯಾದ ಅನೇಕ ದೇಶಗಳಲ್ಲಿ ಮಹಿಳೆಯರನ್ನು ಈ ಕ್ರೀಡೆಯಿಂದ ನಿಷೇಧಿಸಲಾಯಿತು. ಸ್ಪೇನ್‌ನಲ್ಲಿ 1974ರ ನಂತರ ಅವಕಾಶ ಕಲ್ಪಿಸಲಾಯಿತು. ಹೆಸರಿಗೆ ಮಾತ್ರ ಅವಕಾಶ ಕಲ್ಪಿಸಿ ಅವರನ್ನು ಕ್ರೀಡೆಯಿಂದ ದೂರವುಳಿಸುವ ಪ್ರಯತ್ನಗಳು ಮಾತ್ರ ಮರೆಯಲ್ಲೇ ನಡೆದವು.

ಇಂಥ ಪ್ರಯತ್ನಗಳ ವಿರುದ್ಧ ಆರಂಭದ ದಿನಗಳಲ್ಲೇ ಸೆಟೆದು ನಿಂತ ಹೆಣ್ಣುಮಕ್ಕಳೂ ಇದ್ದರು. ಅವರಲ್ಲೊಬ್ಬರು ಪ್ಯಾಟ್ರಿಷಿಯಾ ಮೆಕ್‌ಕಾರ್ಮಿಕ್.

'ದಿ ಗೋಲ್ಡನ್ ಗಾಡೆಸ್' ಎಂದೇ ಕರೆಸಿಕೊಂಡ ಕಾಂಚಿತಾ ಸಿಂಟ್ರಾನ್ (1922–2009), ಗೂಳಿಕಾಳಗದಲ್ಲಿ ವೀರಾವೇಶಕ್ಕೆ ಹೆಸರು ಪಡೆದ ಮಹಿಳೆ. 1936ರಿಂದ 1950ರ ಅವಧಿಯಲ್ಲಿ ಸುಮಾರು 750 ಗೂಳಿಗಳನ್ನು ಕಾಳಗದಲ್ಲಿ ಕೊಂದ ದಾಖಲೆಯಿದೆ.

ಈಕೆಯ ಕುರಿತು 1968ರಲ್ಲಿ 'ಮೆಮೊಯಿರ್ಸ್ ಆಫ್ ಬುಲ್‌ಫೈಟರ್' ಎಂಬ ಪುಸ್ತಕ ಕೂಡ ಪ್ರಕಟಗೊಂಡಿದೆ.

'ಮಹಿಳೆಯು ಪುರುಷನೊಂದಿಗೆ ಸ್ಪರ್ಧೆಗೆ ನಿಂತರೆ ತನ್ನ 'ಹೆಣ್ತನ'ದ ಭಾವವನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಧೋರಣೆಯಿರುವ ಪ್ರತಿ ಪುರುಷನಿಗೂ ಈಕೆಯ ದಾಖಲೆ ಒಂದು ಖಂಡನೆಯಾಗಿ ನಿಂತಿದೆ' ಎಂದು ಅಮೆರಿಕದ ಬರಹಗಾರ, ಸಿನಿಮಾ ನಿರ್ದೇಶಕನಾದ ಆರ್ಸನ್ ವೆಲ್ಲೆಸ್ ಹೊಗಳಿಕೆಯ ಮಾತುಗಳನ್ನಾಡಿದ್ದಾರೆ.

